
# ಸ್ವಾಮಿ ತ್ಯಾಗೀಶಾನಂದರು : ತಪಸ್ವೀ ಹಾಗೂ ವಿದ್ವಾಂಸ ಸಂನ್ಯಾಸಿ

ಸ್ವಾಮಿ ಸುಖಾತ್ಮಾನಂದ

ಶ್ರೀರಾಮಕೃಷ್ಣರ ಜೀವನ, ಸಂದೇಶಗಳೊಂದಿಗೆ ಶಾಸ್ತ್ರ-ತತ್ತ್ವಗಳ ಆಳವಾದ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದ ಒಬ್ಬರು ಮಹಾನ್ ಸಾಧುಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ. ಲೇಖಕರು ಹಿರಿಯ ಸಂನ್ಯಾಸಿಗಳು; ನಿರಂತರ ವ್ಯಾಸಂಗ ಹಾಗೂ ಸಾಧನೆಗಳಲ್ಲಿ ನಿರತರು. ಪೂಜ್ಯರು ಪ್ರಸ್ತುತ ಹಲಸೂರು ರಾಮಕೃಷ್ಣ ಮಠದಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ.

ಸ್ವಾಮಿ ತ್ಯಾಗೀಶಾನಂದರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದಾಗ ಅವರ ಸಂಪರ್ಕಕ್ಕೆ ಬಂದ ಸಂನ್ಯಾಸಿಗಳ ಹಾಗೂ ಭಕ್ತರ ನೆನಪುಗಳಿಂದ ಸಂಗ್ರಹಿಸಿದ ಕೆಲವು ಸಂಗತಿಗಳನ್ನು ಇಲ್ಲಿ ಬರೆಯುತ್ತಿದ್ದೇನೆ. ಸುಮಾರು ೧೯೪೯-೫೦ರ ಸಂದರ್ಭದಲ್ಲಿ ಅವರ ಬಳಿ ಆಶ್ರಮ ಸೇರಿಕೊಂಡಿದ್ದ ಸ್ವಾಮಿ ಕೀರ್ತಿದಾನಂದಜಿಯವರನ್ನು ನೋಡಲು ನಾನು ಬೆಂಗಳೂರು ಆಶ್ರಮಕ್ಕೆ ಹೋಗುತ್ತಿದ್ದೆ; ನಾನು ಆಗ ಸ್ವಾಮಿ ತ್ಯಾಗೀಶಾನಂದ ಮಹಾರಾಜರನ್ನು ಕಂಡಿದ್ದೆ.

ಅವರ ಜೀವನದ ಸಂಕ್ಷಿಪ್ತ ಪರಿಚಯ: ಸ್ವಾಮಿ ತ್ಯಾಗೀಶಾನಂದರು (೧೮೮೨-೧೯೫೧) ತ್ರಿಚೂರಿನ ಕೊಚ್ಚಿ ರಾಜಮನೆತನಕ್ಕೆ ಸೇರಿದವರು; ವಿ.ಕೆ. ಕೃಷ್ಣ ಮೆನನ್ ಎಂಬುದು ಅವರ ಪೂರ್ವಾಶ್ರಮದ ಹೆಸರು. ಮದ್ರಾಸು ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿಯನ್ನು ಪಡೆದಿದ್ದ ಅವರು ಅತ್ಯುತ್ತಮ ವಿದ್ಯಾರ್ಥಿಯಾಗಿದ್ದರು. ಅನಂತರ ಅವರು ಕಾನೂನು ಕಲಿಯುತ್ತಿದ್ದರು. ಆ ದಿನಗಳಲ್ಲಿ ಅವರು ಮದ್ರಾಸಿನ (ಈಗಿನ ಚೆನ್ನೈ) ರಾಮಕೃಷ್ಣ ಮಠದಲ್ಲಿದ್ದ ಸ್ವಾಮಿ ರಾಮಕೃಷ್ಣಾನಂದರ ಸಂಪರ್ಕಕ್ಕೆ ಬಂದರು. ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಮೊದಲ ಪರಮಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರಿಂದ ಅವರು ಆಧ್ಯಾತ್ಮಿಕ ಉಪದೇಶಗಳನ್ನು ಪಡೆದರು. ಅವರು ಕೆಲವು ಕಾಲ ವಕೀಲರಾಗಿ ಕೆಲಸ ಮಾಡಿದರು; ಆದರೆ ಕೆಲಸದ ಮೇಳೆ ಸುಳ್ಳು ನುಡಿಯುವುದು ಅವರಿಗೆ ಸರಿ ಕಾಣಲಿಲ್ಲ; ಆದ್ದರಿಂದ ಕೆಲಸವನ್ನು ಬಿಟ್ಟುಬಿಟ್ಟರು. ಅವರು 'ವಿವೇಕೋದಯಂ ಸಂಘ ಶಾಲೆ'ಯ 'ಶೀರಾಮಕೃಷ್ಣ ಗುರುಕುಲ'ಕ್ಕೆ ಮುಖ್ಯೋಪಾಧ್ಯಾರಾದರು. ೧೯೨೪ರಲ್ಲಿ ಅವರು ಕೇರಳದಲ್ಲಿ ಬರ ಪರಿಹಾರ ಕಾರ್ಯವನ್ನು ನಡೆಸಿದರು. ಅವರು ಗಾಂಧೀಜಿಯವರ ಅನುಯಾಯಿಯಾಗಿದ್ದರು; ಅವರಿಂದ ಪ್ರಭಾವಿತರಾಗಿ ತಮ್ಮ ಜೀವನದುದ್ದಕ್ಕೂ ಖಾದಿ ವಸ್ತ್ರವನ್ನೇ ಧರಿಸಿದರು. ಶಾಲೆಯ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ಚರಕದಿಂದ ಬಟ್ಟೆ ನೇಯುತ್ತಿದ್ದರು. ಆಗಿನ ಕಾಲದ ಸಮಾಜಕ್ಕೆ ವಿರುದ್ಧವಾಗಿ ಅವರ ಹರಿಜನ ಹುಡುಗ-ಹುಡುಗಿಯರಿಗಾಗಿ ವಿದ್ಯಾರ್ಥಿನಿಲಯವನ್ನು ನಡೆಸುತ್ತಿದ್ದರು. ಗಾಂಧೀಜಿಯವರು ಅವರ ಶಾಲೆಗೂ ಭೇಟಿ ನೀಡಿದ್ದರು.



ಏಕಾದಶಿ ವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಅವರು, ದ್ವಾದಶಿ ದಿನದಂದು ಕಣ್ಣಿಗೆ ಬಿದ್ದ ಮೊದಲ ಭಿಕ್ಷುಕನನ್ನು ಕರೆದುಕೊಂಡು ಬಂದು, ಅವನೊಂದಿಗೆ ಊಟ ಮಾಡುತ್ತಿದ್ದರು – ಪ್ರಸಾದ ಎಂಬಂತೆ. ಸ್ವಾಮಿ ವಿವೇಕಾನಂದರು ಬೋಧಿಸಿದ 'ಮಾನವನಲ್ಲಿ ದೇವರನ್ನು ಕಾಣು' ಎಂಬ ಉಪದೇಶವನ್ನು ಅವರು ಈ ರೀತಿ ಪಾಲಿಸುತ್ತಿದ್ದರು. ಅವರ ತಿರುವಣ್ಣಾಮಲೈಗೆ ಹೋಗಿ, ಅಲ್ಲಿ ಶ್ರೀ ರಮಣ ಮಹರ್ಷಿಗಳೊಂದಿಗೆ ಕೆಲವು ಕಾಲ ತಂಗಿದ್ದರು. ಕೆಲವು ಮಂದಿ ಸಾಧುಗಳನ್ನು 'ರಮಣ ದರ್ಶನ'ಕ್ಕಾಗಿ ಅಲ್ಲಿಗೆ ಕಳುಹಿಸುತ್ತಿದ್ದರು ಕೂಡ. ೧೯೨೨ರಲ್ಲಿ ಅವರು ರಾಮಕೃಷ್ಣ ಮಹಾಸಂಘ

ವನ್ನು ಸೇರಿದರು. ೧೯೩೨ರಲ್ಲಿ ಅವರು ಸಂಘದ ಎರಡನೇ ಪರಮಾಧ್ಯಕ್ಷರಾದ ಸ್ವಾಮಿ ಶಿವಾನಂದರಿಂದ ಸಂನ್ಯಾಸ ದೀಕ್ಷೆ ಪಡೆದರು. ಕಠಿಣ ತಪಸ್ಸು, ಸಾಧನೆಗಳಿಂದ ಅವರ ಆರೋಗ್ಯ ಹದಗೆಟ್ಟಿತು. ೧೯೩೮ರಲ್ಲಿ ಅವರನ್ನು ಬೆಂಗಳೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಅವರು ಅಲ್ಲಿ ಹಿಂದಿನಂತೆಯೇ ವಿದ್ವತ್ಪೂರ್ಣವಾದ ಪ್ರವಚನಗಳೊಂದಿಗೆ, ಶಾಸ್ತ್ರಗ್ರಂಥಗಳ ಮೇಲಿನ ಉಪನ್ಯಾಸಗಳೊಂದಿಗೆ ಮುಂದುವರಿದರು. ಅವರು ರಚಿಸಿದ 'ನಾರದ ಭಕ್ತಿ ಸೂತ್ರಗಳು' ಹಾಗೂ 'The Message of Bhagavata' ಗ್ರಂಥಗಳು ಅತ್ಯಂತ ಅಪೂರ್ವ ಕೃತಿಗಳೆಂದು ಪರಿಗಣಿಸಲ್ಪಟ್ಟಿವೆ. 'ತ್ಯಾಗ ಮತ್ತು ಸೇವೆ'ಗೆ ಸಮರ್ಪಿತವಾದ ಅವರ ಜೀವನವು ೧೯೫೧ರ ಆಗಸ್ಟ್ ೬ರಂದು ಪರಿಪೂರ್ಣತೆಯನ್ನು ಕಂಡಿತು.

ಸ್ವಾಮಿ ತ್ಯಾಗೀಶಾನಂದರ ಹೆಸರನ್ನು ಕೇಳಿದಾಗ ಕಣ್ಣ ಮುಂದೆ ಬರುವ ಭವ್ಯ ಚಿತ್ರಣವೆಂದರೆ – ಎತ್ತರವಾದ, ರಾಜ ಗಾಂಭೀರ್ಯದ ಆಕಾರ, ಪ್ರಾಚೀನ ಋಷಿಗಳಂತಿರುವ ನೋಟ, 'ಭೀಷ್ಮ'ರಂತೆ ಇರುವ ವ್ಯಕ್ತಿತ್ವ. ಅವರು 'ಭೀಷ್ಮ'ರೇನೋ ನಿಜ, (ಭೀಷ್ಮ ಎಂದರೆ ಭಯಾನಕ ಎಂದರ್ಥ) ಅವರ ಜ್ಞಾನ, ವಿದ್ವತ್ತು, ತ್ಯಾಗಗಳಲ್ಲಿ ಭೀಷ್ಮರೇ ಆಗಿದ್ದರು; ಆದರೆ ಭಯಾನಕರಾಗಿರಲಿಲ್ಲ. ('ತ್ಯಾಗೀಶ' – ತ್ಯಾಗಕ್ಕೆ ಒಡೆಯ ಎಂಬ ಹೆಸರಿಗೆ ಅನ್ವರ್ಥವಾಗಿದ್ದರು. ಅವರ ಸಂನ್ಯಾಸ ಗುರುಗಳಾದ ಸ್ವಾಮಿ ಶಿವಾನಂದ ಮಹಾರಾಜ್, ಶ್ರೀರಾಮಕೃಷ್ಣರ ನೇರ ಶಿಷ್ಯರೂ, ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರೂ ಆಗಿದ್ದರು, ಅವರು ಕೊಟ್ಟ ಸಮರ್ಪಕವಾದ ಹೆಸರು ಅದು.) ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ಮಾಧವಾನಂದರು ಅವರ ಶ್ರದ್ಧಾಂಜಲಿಯ ಸಂದರ್ಭದಲ್ಲಿ ಹೀಗೆ ಬರೆದಿದ್ದರು:''ಆಧ್ಯಾತ್ಮಿಕ ಗುಣಗಳ ನಿಧಿಯಾಗಿದ್ದ ಸಂನ್ಯಾಸಿ ಅವರು.'' ಯಾರು ಶ್ರೇಷ್ಠ ಸಂತರು ಎಂದು ಖಚಿತವಾಗಿ ನಿರ್ವಚಿಸಿ ಹೇಳುವುದು ಅತ್ಯಂತ ಕಠಿಣ; ಯಾವ ಗುಣ ಒಬ್ಬನನ್ನು ಸಂತನನ್ನಾಗಿ ಮಾಡುತ್ತದೆ ಎಂದು ಹೇಳುವುದೂ ಕಠಿಣ. ನಾವು ಸಂತನಲ್ಲಿ ನಿರೀಕ್ಷಿಸುವ ಗುಣಗಳ ಮಟ್ಟಕ್ಕೆ ಯಾರು ಬರುತ್ತಾರೆ ಎಂದು ಕಂಡುಕೊಳ್ಳುವುದೂ ಅಷ್ಟೇ ಕಷ್ಟ. ಸ್ವಾಮಿ ತ್ಯಾಗೀಶಾನಂದರಿಗೆ ಆಪ್ತರಾಗಿದ್ದ ಹಾಗೂ ಅವರ ತರಗತಿಗಳಲ್ಲಿ ಕುಳಿತು ಕಲಿತ ಸಂನ್ಯಾಸಿ, ವಿದ್ಯಾರ್ಥಿಗಳು ಬರೆದಿಟ್ಟ ಕೆಲವು ಘಟನೆಗಳಿಂದ ಅವರ ಜೀವನದ ಕೆಲವು ನೋಟಗಳನ್ನು ಕಾಣಬಹುದು.

ವಿದ್ವತ್ತು, ತ್ಯಾಗಗಳಲ್ಲಿ ಸ್ವಾಮೀಜಿಗಿಂತ ಹೆಚ್ಚಿನವರು ಒಂದು ವೇಳೆ ಸಿಗದೆ ಹೋದರೂ ಸಮಾನರಾದವರು ಇತರ ಹಲವರಿರಬಹುದು; ಆದರೆ ಅವರ ಅಗಾಧ ವಿದ್ವತ್ತು ಹಾಗೂ ವಿವೇಚನಾ ಶಕ್ತಿಯೊಂದಿಗೆ ಮೇಳೈಸಿದ ಅನಂತ ಸಹನ ಶಕ್ತಿ – ಇವನ್ನು ಬೇರೆ ಯಾರಲ್ಲೂ ಕಾಣಲಾಗದು. ನಲುವತ್ತೆಂಟು ಗಂಟೆಗಳ ಉಪವಾಸ, ಅದರ ನಂತರ ೫–೬ಗಂಟೆಗಳ ದೀರ್ಘ ಉಪನ್ಯಾಸ ಅವರನ್ನು ಸ್ವಲ್ಪವೂ ಕುಂದಿಸುತ್ತಿರಲಿಲ್ಲ ; ಅವರಿಗೆ ಅದು ಸಹಜವೂ ಒಪ್ಪುವಂತಹದೂ ಆಗಿತ್ತು. ಅವರಲ್ಲಿ ಅಂತರ್ಗತವಾಗಿದ್ದ ಈ ಗುಣಗಳ ಬಗ್ಗೆ ಸ್ವಲ್ಪವೂ ಆಸಕ್ತಿ–ಗಮನ ಇರುತ್ತಿರಲಿಲ್ಲ. ಮಿಸ್ ಮ್ಯಾಕ್ಲೌಡ್ ಅವರು ಸ್ವಾಮಿ ವಿವೇಕಾನಂದರ ಬಗ್ಗೆ ಮಾತನಾಡುತ್ತ, ಅವರು ಹೇಗೆ ತಮ್ಮ ಬಗ್ಗೆ ನಿರಾಸಕ್ತಿಯಿಂದ ಇರುತ್ತಿದ್ದರು, ಹಾಗೂ ತಮ್ಮೆದುರು ಇದ್ದವರ ಬಗ್ಗೆ ಆಸಕ್ತಿ ಹೊಂದಿರುತ್ತಿದ್ದರು–ಎಂದು ಹೇಳುತ್ತಿದ್ದರು. ತ್ಯಾಗೀಶಾನಂದಜಿಯವರನ್ನು ಕುರಿತಾಗಿ ಕೂಡ ಇದೇ ಮಾತನ್ನು ಹೇಳಬಹುದು. ವಿದ್ವತ್ತು, ತಿಳಿವಳಿಕೆ, ತ್ಯಾಗ ಹಾಗೂ ಇನ್ನಿತರ ಗುಣಗಳೆಲ್ಲ (ಶ್ರೀರಾಮಕೃಷ್ಣರು ಹೇಳುವಂತೆ) ಭಗವಂತನ ಸಾಕ್ಷಾತ್ಕಾರಕ್ಕಾಗಿ ಇರುವುವು. ಆ ಒಂದು ಗುರಿಯನ್ನು ಹೊಂದುವುದಕ್ಕಾಗಿಯೇ ಸ್ವಾಮಿ ತ್ಯಾಗೀಶಾನಂದರು ತಮ್ಮ ಈ ಎಲ್ಲ ಸಾಮರ್ಥ್ಯಗಳನ್ನು ಹಾಗೂ ಗುಣಗಳನ್ನು ಪರಿವರ್ತಿಸಿಕೊಂಡರು. ಇತರರ ಹಾಗೆ ಪ್ರದರ್ಶನ, ಹೆಸರು–ಕೀರ್ತಿಗಳಿಗಾಗಿ ಸ್ವಾಮೀಜಿಯವರು ಈ ಗುಣಗಳನ್ನು ಬಳಸಿಕೊಳ್ಳಲಿಲ್ಲ. ಅವರಿಗೆ ಪ್ರಚಾರ, ಆತ್ಮಶ್ಲಾಘನೆ ಇತ್ಯಾದಿಗಳು ಎಂದಿಗೂ ಇರಲಿಲ್ಲ.

ಅವರ ತರಗತಿಗಳಿಗೆ ಹಾಜರಾಗುತ್ತಿದ್ದ ವಿದ್ಯಾರ್ಥಿಯೊಬ್ಬನು ಒಂದು ಮಧ್ಯಾಹ್ನ ಅವರನ್ನು ಭೇಟಿಯಾಗಲು ಬಂದಿದ್ದ. ಆಗ ಆಶ್ರಮದ ದ್ವಾರಗಳೆಲ್ಲ ಮುಚ್ಚಿದ್ದವು. ಸ್ವಾಮೀಜಿಯವರು ಬಹುಶಃ ನಿದ್ರಿಸಿರಬೇಕು ಎಂದು ಅವನು ಭಾವಿಸಿದ್ದ. ಮುಂದಿನ ಬಾರಿ ಬಂದಾಗ ಅವನು ಹೀಗೆ ಬಂದಿದ್ದ ವಿಷಯವನ್ನು ಸ್ವಾಮೀಜಿಯವರಿಗೆ ತಿಳಿಸಿದಾಗ ಅವರು ಹಾಸ್ಯವಾಗಿ ಹೀಗೆಂದರು: ''ಏನು? ಸಾಧುಗಳು ಎಂದಾದರೂ ಮಲಗುತ್ತಾರೆಯೆ? ಅವರು ಯಾವಾಗಲೂ ಸಮಾಧಿಯಲ್ಲಿರುತ್ತಾರೆ!'' ಆ ವಿದ್ಯಾರ್ಥಿ ಅದನ್ನು ನಂಬಿಯೇ ಬಿಟ್ಟಿದ್ದ; ಅದನ್ನು ನಿಜವೆಂದೇ ಎಲ್ಲರ ಮುಂದೆ ಹೇಳಿಕೊಂಡು ಓಡಾಡತೊಡಗಿದ. ಬಹುಶಃ ಸ್ವಾಮೀಜಿಯವರು ತಮ್ಮ ಮನಃಸ್ಥಿತಿಯ ಬಗ್ಗೆ – 'ನಿದ್ರಾಸಮಾಧಿ ಸ್ಥಿತಿಃ' ಎಂಬಂತೆ ಹೇಳಿದ್ದಿರಬೇಕು. ಆಧ್ಯಾತ್ಮಿಕವಾಗಿ ಮುಂದುವರಿದ ಸಾಧಕನ ಪಾಲಿಗೆ ನಿದ್ರೆಯೆಂದರೆ ಅದು ಸಾಧಾರಣದ ನಿದ್ರೆಯಲ್ಲ; ನಿಜವಾಗಿ ಅದೊಂದು ಸಮಾಧಿ ಸ್ಥಿತಿಯಾಗಿರುತ್ತದೆ. ಸಂಪೂರ್ಣವಾಗಿ ದೈವೀಪ್ರಜ್ಞೆಯಲ್ಲಿ ಮುಳುಗಿದ ಸ್ಥಿತಿ ಅದು, ಎಚ್ಚರದ ಸ್ಥಿತಿಯಲ್ಲೂ ಅವರು ಹಾಗಿರುತ್ತಾರೆ. ಓದು, ಅಧ್ಯಯನ, ಅಧ್ಯಾಪನ, ಪ್ರವಚನ ಹಾಗೂ ಇತರ ಎಲ್ಲ ಕೆಲಸಗಳೂ ಅವರ ಪಾಲಿಗೆ ಸಾಧನೆಯೇ ಆಗಿರುತ್ತಿದ್ದವು. (ಮಧ್ವಾಚಾರ್ಯರನ್ನು ಉದ್ಧರಿಸಿ ಅವರು ಹೀಗೆ ಹೇಳಿದ್ದರು). ತಮ್ಮ ಪದ್ಧತಿಯನ್ನು ಬಿಟ್ಟು ಅವರೆಂದಿಗೂ ತಮ್ಮ ವಿದ್ವತ್ತಿನ ಪ್ರದರ್ಶನ ಮಾಡಲು ಹೊರಡುತ್ತಿರಲಿಲ್ಲ, ಪುಸ್ತಕ ಪ್ರಕಟನೆ ಮಾಡಲು ಉತ್ಸುಕರಾಗಿರುತ್ತಿರಲಿಲ್ಲ. ಅವರ ಎಷ್ಟೋ ಟಿಪ್ಪಣಿಗಳು ಮುದ್ರಣವಾಗದೆ ಹಾಗೆಯೇ ಉಳಿದಿರುತ್ತಿದ್ದವು. ಅವರ ಜೀವನವಿಡೀ ಆಧ್ಯಾತ್ಮಿಕ ಸಾಧನೆಯಲ್ಲೇ ಕೇಂದ್ರಿತವಾಗಿರುತ್ತಿತ್ತು.

ಸ್ವಾಮಿ ತ್ಯಾಗೀಶಾನಂದರು ಉನ್ನತ ದರ್ಜೆಯ ವಿದ್ವಾಂಸರು; ಅತ್ಯಂತ ಕಟ್ಟುನಿಟ್ಟಿನ ತಪಸ್ವಿಗಳು. ಆದರೆ ಅವುಗಳನ್ನು ಎಂದಿಗೂ ತೋರ್ಪಡಿಸಿಕೊಳ್ಳದ ನಿರಾಸಕ್ತರು. ಶಾಸ್ತ್ರಗಳಿಗೆ ಅವರು ನೀಡಿದ ವಿವರಣೆ, ವಿಶ್ಲೇಷಣೆಗಳು ಪುಸ್ತಕರೂಪದಲ್ಲಿ ಹೊರಬಂದವಾಗಲೀ, ತರಗತಿಯ ನೋಟ್ಸ್ ರೂಪದಲ್ಲಿ ಉಳಿದವಾಗಲೀ ಮುದ್ರಾಣಾಲಯಕ್ಕೆ ಹೋಗದೆ ಉಳಿದಿದ್ದವು. ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿಯ ೯ ಸಂಪುಟಗಳಲ್ಲಿ ಕಂಡು ಬರುವ ಅದೇ ಉದ್ದೇಶ ಸ್ವಾಮಿ ತ್ಯಾಗೀಶಾನಂದರಲ್ಲೂ ಇತ್ತು – ಆಧುನಿಕ ಮನಸ್ಸುಗಳಿಗೆ

ಶಾಸ್ತ್ರವಿಚಾರಗಳನ್ನು ಅರ್ಥವಾಗುವಂತೆ ಸ್ಪಷ್ಟವಾಗಿ ತಿಳಿಸುವುದು, ಹಾಗೂ ಅವು ಸಾಕ್ಷಾತ್ಕಾರದೆಡೆಗೆ ಕರೆದೊಯ್ಯುವಂತೆ ಜೀವನಕ್ಕೆ ಒಂದು ಅರ್ಥವನ್ನು ನೀಡುವುದು. ಇದರಿಂದ ಅವರ ಜೀವನಕ್ಕೆ ಸಾರ್ಥಕತೆ, ಸಾಫಲ್ಯ ಉಂಟಾಗುವುದು.

ಅವರ ಚಿಂತನೆಗಳು ರಾಮಕೃಷ್ಣ-ವಿವೇಕಾನಂದರ ಚಿಂತನೆಗಳೊಂದಿಗೆ ಮಿಳಿತವಾಗಿದ್ದವು; ಅವರ ಶಾಸ್ತ್ರಗಳನ್ನು ವಿವರಿಸುವಾಗ ಸಂಪೂರ್ಣ ಅವರ ಚಿಂತನೆಗಳಿಗೆ ಅನುಸಾರವಾಗಿಯೇ ವಿವರಿಸುತ್ತಿದ್ದರು. ಬೆಂಗಳೂರು ಆಶ್ರಮದ ಆವರಣದಲ್ಲಿ ವೇದಾಂತ ಕಾಲೇಜಿಗೆ ಅವರು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾಗ, ಯುವ ಜನಾಂಗಕ್ಕೆ ವೇದಾಂತದ ಸಂದೇಶಗಳನ್ನು ಹರಡುವ ನಿಟ್ಟಿನಲ್ಲಿ ಗೀತೆ-ಭಾಗವತ-ಉಪನಿಷತ್ತು ಯಾವ ಶಾಸ್ತ್ರಗ್ರಂಥಗಳೇ ಆಗಿರಲಿ, ಅವನ್ನು 'ರಾಮಕೃಷ್ಣ ಉಪನಿಷತ್' ಎನ್ನುತ್ತಿದ್ದರು. (ಇದು ಸಿ.ರಾಜಗೋಪಾಲಾಚಾರಿಯವರು ಬರೆದ ಇದೇ ಹೆಸರಿನ ಪುಸ್ತಕವನ್ನು ಕುರಿತು ಹೇಳಿದ್ದಲ್ಲ; ರಾಮಕೃಷ್ಣ-ವಿವೇಕಾನಂದರ ಸಂದೇಶಗಳು ಇವೇ ಎಂಬರ್ಥದಲ್ಲಿ ಹೇಳಿದ್ದರು) ಶ್ರೀರಾಮಕೃಷ್ಣರ ಬಗ್ಗೆ ನೇರವಾಗಿ ಅವರು ಏನಾದರೂ ಹೇಳಲು ಹಿಂಜರಿಯುತ್ತಿದ್ದರು – ಏಕೆಂದರೆ ಅವರ ಬಗ್ಗೆ ಮಾತನಾಡಲು ತಾನು ಅಷ್ಟೊಂದು ಅರ್ಹ ವ್ಯಕ್ತಿಯಲ್ಲ ಎಂದೇ ಅವರು ಭಾವಿಸಿದ್ದರು. ಆದರೆ ಯಾವುದೇ ಗ್ರಂಥವನ್ನು ಅಭ್ಯಸಿಸುವಾಗಲೂ ಅದನ್ನು ಶ್ರೀರಾಮಕೃಷ್ಣರ ಬೆಳಕಿನಲ್ಲಿಯೇ ಓದಬಯಸುತ್ತಿದ್ದರು.

Gospel of Sri Ramakrishna ಗ್ರಂಥವನ್ನು ೧೦೮ ಬಾರಿ ಓದುವ ಸಂಕಲ್ಪವನ್ನು ಅವರು ಮಾಡಿದ್ದರು. ಭಗವಂತನ ನಾಮ ಜಪ ಮಾಡುವ ಸಂಖ್ಯೆ ಅದು. ಈ ಗ್ರಂಥ ಹಾಗೂ ಭಗವಂತ ಎರಡೂ ಒಂದೇ ಎಂದು ಇದರರ್ಥ. ಅವರು ಅನೇಕ ಬಾರಿ ಹೀಗೆ ಈ ಗ್ರಂಥವನ್ನು ಓದಿದ್ದರು.

ಸ್ವಾಮೀಜಿಯವರು ಕಠಣ ತಪಸ್ಸಿನ ಕಾರಣದಿಂದ ಎಂದಿಗೂ ಒಣಗಿದ ಮುಖದಿಂದ ಕೂಡಿರುತ್ತಿರಲಿಲ್ಲ; ಪ್ರೀತಿ, ವಿಶ್ವಾಸಗಳಿಂದ ಅದು ಮಧುರವಾಗಿರುತ್ತಿತ್ತು. ಅವರು ಕೇವಲ ಜ್ಞಾನಿಯಾಗಿರಲಿಲ್ಲ, ಭಕ್ತರೂ ಆಗಿದ್ದರೂ, ಕರ್ಮಯೋಗಿಯೂ ಆಗಿದ್ದರು. ಈ ಎಲ್ಲ ಗುಣಗಳು ಒಂದಕ್ಕೊಂದು ಪೂರಕವಾಗಿದ್ದವು. ಈ ಮೂರೂ ಗುಣಗಳು ಒಂದರಲ್ಲೊಂದು ಸಮನ್ವಯಗೊಂಡಿದ್ದ ತುಂಬು ವ್ಯಕ್ತಿತ್ವ ಅವರದಾಗಿತ್ತು. ಅನೇಕ ವೇಳೆ ಅವರು ತಮ್ಮ ಕಟ್ಟುನಿಟ್ಟಿನ ಸ್ವಭಾವದ ಬಾಹ್ಯವರ್ತನೆಯಿಂದ ಜನರನ್ನು ದೂರವಿಡುತ್ತಿದ್ದರು; ಆದರೆ ಯಾರಾದರೂ ಅವರಿಗೆ ಸಮೀಪವಾಗಿಬಿಟ್ಟರೆಂದರೆ, ಅವರ ಪ್ರೀತಿ-ಆತ್ಮೀಯತೆಗಳು ಅವರಿಗೆ ಅರ್ಥವಾಗುತ್ತಿದ್ದವು; ಯಾರೂ ಗಮನಿಸದಿರುವ ಅವರ ಮಧುರ ಸ್ವಭಾವ ಗಮನಕ್ಕೆ ಬರುತ್ತಿತ್ತು.

'ನಾರದ ಭಕ್ತಿ ಸೂತ್ರ'ದಲ್ಲಿ (೩೯) ಹೇಳುವಂತೆ, ಶ್ರೇಷ್ಠ ಸಂತರ ಜೀವನ ವಿಧಾನ, ರೀತಿನೀತಿಗಳು ನಿಗೂಢವಾಗಿರುತ್ತವೆ, ಆದರೆ ಅವರ ಒಡನಾಟದಿಂದ ಅದು ಬೆಳಕಿಗೆ ಬರುತ್ತದೆ. ಯಾರಾದರೂ ತಾವಾಗಿಯೇ ಕೇಳಿದಲ್ಲದೆ ಸ್ವಾಮಿ ತ್ಯಾಗೀಶಾನಂದರು ಎಂದಿಗೂ ಸಲಹೆ, ಮಾರ್ಗದರ್ಶನ ನೀಡುತ್ತಿರಲಿಲ್ಲ. ಅವರೆಂದೂ ತಾವೊಬ್ಬ ಗುರು, ಆಚಾರ್ಯ, ಅಧ್ಯಾಪಕ ಎಂಬ ಭಾವದಿಂದಿರುತ್ತಿರಲಿಲ್ಲ. ಈ ವಿಚಾರದಲ್ಲಿ ಅವರ ಮನೋಭಾವವು ಶ್ರೀರಾಮಕೃಷ್ಣರಂತೆ – ಅವರಿಗೆ ಎಂದೂ 'ಗುರು' ಎಂಬ ಪದವನ್ನು ಸಹಿಸಲಾಗುತ್ತಿರಲಿಲ್ಲ. ಅದೇ ರೀತಿ ಬುದ್ಧನಂತೆ ಕೂಡ – ಬುದ್ಧನು ತನ್ನ ಶಿಷ್ಯಂದಿರಿಗೆ 'ಆತ್ಮದೀಪೋ ಭವ' ಎಂದ, ತನಗೆ ತಾನೇ ಬೆಳಕು ತಂದುಕೋ –ಎಂದು. ಅಥವಾ ಶ್ರೀಕೃಷ್ಣ ಹೇಳಿದಂತೆ, 'ಉದ್ಧರೇದಾತ್ಮನಾತ್ಮಾನಂ' – ತನ್ನನು ತಾನು ಉದ್ಧರಿಸಿಕೊಳ್ಳಬೇಕು, ಎಂಬಂತೆ ಸ್ವಾಮೀಜಿಯವರ ಮನೋಭಾವವಿತ್ತು.

ಆತ್ಮಸಾಕ್ಷಾತ್ಕಾರ ಮತ್ತು ಲೌಕಿಕ ಸಾಧನೆ ಎರಡೂ ಬೇರೆ ಬೇರೆ ಸಂಗತಿಗಳು. ಅದನ್ನು ಅವರು ಹೇಳಿರುವ ರೀತಿ, 'ಲೋಟ ಅರ್ಧ ತುಂಬಿದೆ'– ಅದು ಸಣ್ಣ ಲೋಟವಾಗಿರಲಿ, ದೊಡ್ಡ ಲೋಟವಾಗಿರಲಿ – ಎಂಬಂತೆ. 'ಆತ್ಮಸಾಕ್ಷಾತ್ಕಾರದ' ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕೂಡ ಇದು ಅದೇ ರೀತಿ. ಎಲ್ಲರ ವಿಷಯದಲ್ಲೂ ಸಾಕ್ಷಾತ್ಕಾರದ ವಸ್ತುವಾದ ಆತ್ಮವು ಸಮಾನವಾಗಿದೆ; ಆದರೆ ಅದನ್ನು ಹೊಂದಿರುವ ಪಾತ್ರೆ ಸಣ್ಣದೋ ದೊಡ್ಡದೋ ಆಗಿರುತ್ತದೆ – ಇದು ಸಾಕ್ಷಾತ್ಕಾರಕ್ಕೆ ಮೊದಲು. ಸ್ವಾಮಿ ತ್ಯಾಗೀಶನಂದಜಿಯವರ ವೈಶಿಷ್ಟ್ಯವೆಂದರೆ, ಅವರು ಯಾರ ಬಗೆಗೂ ಕೆಟ್ಟ ಮಾತುಗಳನ್ನು ಆಡುತ್ತಿರಲಿಲ್ಲ. ಅವರ ಭಾವನೆಯೇನೆಂದರೆ, ಒಬ್ಬ ವ್ಯಕ್ತಿಯ ಉತ್ತಮ ಗುಣವು ಎಲ್ಲರಿಗೂ ಸೇರಿದ್ದಾಗಿರುತ್ತದೆ, ಆದರೆ ಅವನ ದುರ್ಗುಣಗಳು ಅವನ ಸ್ವಂತದ್ದು. ಕೆಲವು ಸಂಸ್ಕೃತ ಶ್ಲೋಕಗಳು ಅವರಿಗೆ ಅತ್ಯಂತ ಪ್ರಿಯವಾದವು. ಅವನ್ನು ಅವರು ಆಗಾಗ ಉದ್ಧರಿಸುತ್ತಿದ್ದರು:

**ಅಣುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯಃ ಕುಶಲೋ ನರಃ ।**
**ಸರ್ವತಃ ಸಾರಮಾದದ್ಯಾತ್ ಪುಷ್ಪೇಭ್ಯ ಇವ ಷಟ್ಪದಾಃ ॥**

'ಬುದ್ಧಿವಂತನಾದವನು ಎಲ್ಲ ಕಡೆಗಳಿಂದಲೂ ಜ್ಞಾನವನ್ನು ಸಂಪಾದಿಸಬೇಕು. ಶಾಸ್ತ್ರಗಳು ಸಣ್ಣದಿರಲಿ, ದೊಡ್ಡದಿರಲಿ, ಅದರ ಸಾರವನ್ನು ಹೀರಿಕೊಳ್ಳಬೇಕು – ಜೇನು ಎಲ್ಲ ಹೂಗಳಿಂದಲೂ ಜೇನನ್ನು ಸಂಗ್ರಹಿಸುವಂತೆ.'

**ಬ್ರಾಹ್ಮಣಸ್ಯ ಚ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೇ।**
**ಕೃಚ್ಛ್ರಾಯ ತಪಸೇ ಚೇಹ ಪ್ರೇತ್ಯಾನಂತಸುಖಾಯ ಚ ॥**

'ಬ್ರಾಹ್ಮಣನ ಈ ದೇಹವು ಕ್ಷುಲ್ಲಕವಾದ ಕಾಮನೆಗಳನ್ನು ಅನುಭವಿಸಲು ಇರುವುದಿಲ್ಲ. ಕಠಿಣವಾದ ತಪಸ್ಸನ್ನು ಆಚರಿಸಿ, ಉನ್ನತವಾದ ಹಂತದಲ್ಲಿ ಅನಂತ ಸುಖವನ್ನು ಅನುಭವಿಸಲು ಇರುವಂಥದು.'

**ತಾವತ್ ಭ್ರಿಯೇತ ಜಠರಂ ಯಾವತ್ ಸತ್ತ್ವಂ ಹಿ ದೇಹಿನಾಮ್ ।**
**ಅಧಿಕಂ ಯಾಭಿಮಾನ್ಯೇತ ಸಾ ಸ್ತೇನೋ ದಂಡಮರ್ಹತಿ ॥**

'ಎಲ್ಲಿಯತನಕ ಹೊಟ್ಟೆ ತುಂಬುವುದೋ, ಅಷ್ಟೇ ಊಟ ಮಾಡಬೇಕು. ಅದನ್ನು ಮೀರಿ ತಿನ್ನುವವನು ಕಳ್ಳನೇ. ಅವನಿಗೆ ಕಠಿಣ ಶಿಕ್ಷೆ ನೀಡಬೇಕು.'

ಪ್ರತಿದಿನ ಬೆಳಿಗ್ಗೆ ಎದ್ದ ಕೂಡಲೇ ಈ ಪ್ರಾರ್ಥನೆಯನ್ನು ಅವರು ಹೇಳಿಕೊಳ್ಳುತ್ತಿದ್ದರು:

ಯೋಽಹಂ ಮಮಾಸ್ತಿ ಯತ್ಕಿಂಚಿತ್ ಇಹಲೋಕೇ ಪರತ್ರ ಚ ।
ತತ್ಸರ್ವಂ ಭವತೋ ನಾಥ ಚರಣೇಷು ಸಮರ್ಪಿತಮ್ ॥
ಪದೇ ಪದೇ ಯಥಾ ಭಕ್ತಿಃ ಪದಯೋಸ್ತ್ವ ಜಾಯತೇ ।
ತಥಾ ಕುರುಷ್ವ ದೇವೇಶ ನಾಥಸ್ತ್ವಂ ನೋ ಯತಃ ಪ್ರಭೋ ॥

'ಇಹಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ನಾನು, ನನ್ನದು ಏನೇನು ಇದೆಯೋ ಅದೆಲ್ಲವನ್ನೂ ನಾನು ಭಗವಂತ – ನಿನ್ನ ಚರಣಗಳಲ್ಲಿ ಸಮರ್ಪಿಸುತ್ತೇನೆ. ಪ್ರತಿ ಹೆಜ್ಜೆಯಲ್ಲೂ ನಿನ್ನ ಮೇಲೆ ನನಗೆ ಅಚಲವಾದ ಭಕ್ತಿಯನ್ನು ಕರುಣಿಸು. ಹೇ ಭಗವಂತ, ನೀನು ನನ್ನ, ದೇವತೆಗಳ, ಎಲ್ಲದರ ಪ್ರಭುವಲ್ಲವೆ?''

ಸಂನ್ಯಾಸಿಗಳ ಜೊತೆಗೆ ಅವರು ವ್ಯವಹರಿಸುತ್ತಿದ್ದ ರೀತಿ, ಅವರ ಸಮಸ್ಯೆಗಳೊಂದಿಗೆ ಅವರು ವ್ಯವಹರಿಸುತ್ತಿದ್ದ ರೀತಿ, ಅವರೊಂದಿಗೆ ಮಾತನಾಡುತ್ತಿದ್ದ ರೀತಿ ವಿಭಿನ್ನವಾಗಿತ್ತು. ಪ್ರತಿಯೊಬ್ಬ ಸದಸ್ಯರಿಗೂ ಯಾವುದೇ ವಿಷಯದಲ್ಲಿ ನನ್ನದು – ಅವನದು ಎಂಬ ಭಾವನೆ ಇರುವಂತಿಲ್ಲ; ಎಲ್ಲವೂ ಶ್ರೀರಾಮಕೃಷ್ಣಗೆ ಸೇರಿದ್ದು. ಸಂನ್ಯಾಸಿಗಳಿಗೆ ಏನನ್ನೂ ಕೇಳುವ ಅಧಿಕಾರವಿಲ್ಲ. ಆದರೆ ಏನನ್ನಾದರೂ ಕೊಟ್ಟಾಗ, ಅದನ್ನು ಬೇಡವೆಂದು ಹೇಳುವ ಅಧಿಕಾರ ಅವನಿಗಿದೆ. ಸಂನ್ಯಾಸಿಗಳಲ್ಲಿ ಯಾರಾದರೂ ತಮ್ಮ ತಾಯಿಯನ್ನು ಆಗಾಗ ಭೇಟಿ ಮಾಡುವುದಿದ್ದರೆ, ಅಂಥವರಿಗೆ ಅವರು ಸಲಹೆ ನೀಡುತ್ತಿದ್ದರು – 'ಸಂನ್ಯಾಸಿಯ ಆದರ್ಶ ತಮ್ಮ ಎಲ್ಲ ಸಂಬಂಧಗಳನ್ನೂ ಕಡಿದುಕೊಳ್ಳುವುದಲ್ಲ, ಆದರೆ ಎಲ್ಲಾದರೂ ಯಾತ್ರೆ ಹೋಗುವುದಿದ್ದರೆ, ತನ್ನ ಮನೆಗೂ ಭೇಟಿ ನೀಡಲಿ' – ಎಂದಾಗಿತ್ತು. ಭಕ್ತರು ನೀಡುತ್ತಿದ್ದ ಷರತ್ತುಬದ್ಧವಾದ, ಈ ಕಾರಣಕ್ಕಾಗಿ ತಾವೇ ಇದನ್ನು ಬಳಸಿ ಎಂದು ನೀಡುತ್ತಿದ್ದ, ಕಾಣಿಕೆಗಳನ್ನು ಅವರು ಸ್ವೀಕರಿಸುತ್ತಿರಲಿಲ್ಲ. ಅದು ನಿಜವಾದ ಕಾಣಿಕೆ ಆಗುತ್ತಿರಲಿಲ್ಲ. ಯಾರು ಭಕ್ತಿ, ಗೌರವಗಳೊಂದಿಗೆ ಸ್ವಾಮೀಜಿಯವರ ಆಶೀರ್ವಾದವನ್ನು ಬೇಡುತ್ತಾ ಏನನ್ನಾದರೂ ನೀಡುವರೋ, ಪಡೆದ ವ್ಯಕ್ತಿ ಅದನ್ನು ಬೇಕಾದ ರೀತಿಯಲ್ಲಿ ಉಪಯೋಗಿಸಬಹುದೋ, ಅದು ಮಾತ್ರವೇ ನಿಜವಾದ ಕಾಣಿಕೆ ಎನ್ನಿಸಿಕೊಳ್ಳುತ್ತದೆ. ಎಲ್ಲ ಬಗೆಯ ಕಾಣಿಕೆ, ದೇಣಿಗೆಗಳಿಗೂ ಇದು ಅನ್ವಯವಾಗುತ್ತಿತ್ತು.

ತಮ್ಮ ಪೂರ್ವಾಶ್ರಮದಲ್ಲಿ ಅವರು ವಕೀಲ ವೃತ್ತಿಯನ್ನು ಆರಂಭಿಸಿ, ಒಬ್ಬ ಅಪರಾಧಿಯ ಪರವಾಗಿ ವಾದಿಸಿದ್ದರು, ಅದರಿಂದ ಅಪರಾಧಿ ಬಿಡುಗಡೆ ಹೊಂದಿದ್ದ. ಇದಕ್ಕಾಗಿ ಅವರು ಹಣವನ್ನು ಸ್ವೀಕರಿಸಲಿಲ್ಲ, ಹಾಗೂ ವಕೀಲ ವೃತ್ತಿಯನ್ನೇ ತ್ಯಜಿಸಿದ್ದರು. ಬಳಿಕ ತಮ್ಮ ಮನಃಸ್ಥಿತಿಗೆ ಸೂಕ್ತವೆನಿಸುವ ಮುಖ್ಯೋಪಾಧ್ಯಾಯ ವೃತ್ತಿಯನ್ನು ತ್ರಿಚೂರಿನ 'ವಿವೇಕೋದಯಂ' ಪ್ರೌಢಶಾಲೆಯಲ್ಲಿ ವಹಿಸಿಕೊಂಡಿದ್ದರು.

ವೇದಾಂತದಲ್ಲಿ ಬಹುದೊಡ್ಡ ವಿದ್ವಾಂಸರಾಗಿದ್ದ ಪ್ರೊ. ವಿ.ಸುಬ್ರಹ್ಮಣ್ಯ ಅಯ್ಯರ್ ಅವರು ಶ್ರೇಷ್ಠ ತತ್ತ್ವಜ್ಞಾನಿಯೆಂದೇ ಹೆಸರುವಾಸಿಯಾಗಿದ್ದರು, ಬಹಳ ಗೌರವಾದರಗಳಿಗೆ ಪಾತ್ರರಾಗಿದ್ದರು. ಅವರು ಮೈಸೂರು ಸ್ಟಡಿ ಸರ್ಕಲ್‌ನಲ್ಲಿ ೧೯೩೦ರ ದಶಕದಲ್ಲಿ ರಾಮಕೃಷ್ಣ ಮಹಾಸಂಘದ ಅನೇಕ ಸಂನ್ಯಾಸಿಗಳಿಗೆ ವೇದಾಂತವನ್ನು



ವಿ. ಸುಬ್ರಹ್ಮಣ್ಯ ಅಯ್ಯರ್

ಕಲಿಸಿದ್ದರು. ಸ್ವಾಮಿ ತ್ಯಾಗೀಶಾನಂದರೊಂದಿಗೆ ಭಾಗವತದ ಬಗ್ಗೆ ಚರ್ಚೆ ಮಾಡಲು ಅವರು ಬೆಂಗಳೂರು ಆಶ್ರಮಕ್ಕೆ ಬರುತ್ತಿದ್ದರು; ಬಳಿಕ ತಮ್ಮ ಮನೆಗೆ ಮರಳುತ್ತಿದ್ದರು. ಒಂದು ದಿನ ಅಯ್ಯರ್ ಅವರು ಸ್ವಾಮೀಜಿಯವರ ಜೊತೆ ಮಾತುಕತೆ ನಡೆಸಿ, ಅವರ ಕೋಣೆಯಿಂದ ಹೊರಬರುತ್ತಿದ್ದಾಗ ಕಣ್ಣೀರು ಸುರಿಸುತ್ತಿದ್ದರು. 'ಇದೇಕೆ?' ಎಂದು ಕೇಳಿದಾಗ ಅವರು ಹೇಳಿದರು, ''ಸ್ವಾಮೀಜಿ ಇಂಥ ಮಹಾನ್ ಭಕ್ತರು ಎಂಬುದು ನನಗೆ ಗೊತ್ತೇ ಇರಲಿಲ್ಲ.''

ಸ್ವಾಮಿ ತ್ಯಾಗೀಶಾನಂದರು ತಮ್ಮ ತರಗತಿಗಳಿಗೆ ಹಾಜರಾಗುತ್ತಿದ್ದ ಹಾಗೂ ತಮ್ಮೊಂದಿಗೆ ಮಾತನಾಡಲು ಬರುತ್ತಿದ್ದ ಹಲವು ಮಂದಿ ಯುವಕರಿಗೆ ಪ್ರೇರಣೆ ನೀಡಿದ್ದರು. ಅವರಲ್ಲಿ ಕೆಲವರು ರಾಮಕೃಷ್ಣ ಮಿಷನ್ ಸೇರಿ ಸಂನ್ಯಾಸಿಗಳಾದರು. ಮಹಾಸಂಘದಲ್ಲಿ ಅವರು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ, ಹಾಗೂ ಉತ್ತಮ ಸಾಧುಗಳೆಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ಸ್ವಾಮಿ ತ್ಯಾಗೀಶಾನಂದರು ಯಾವುದೇ ನೋಟ್ಸ್‌ಗಳಿಲ್ಲದೆ, ಯಾವುದೇ ಉಲ್ಲೇಖಗಳಿಲ್ಲದೆ ಅನೇಕ ಗಂಟೆಗಳ ಕಾಲ ಪ್ರವಚನ ನೀಡಬಲ್ಲವರಾಗಿದ್ದರು – ಆಗ ಯಾವಾಗಲೂ ಕಣ್ಣು ಮುಚ್ಚಿಕೊಂಡಿರುತ್ತಿದ್ದರು. ಗೀತೆ, ಭಾಗವತ ಹಾಗೂ ಉಪನಿಷತ್ತುಗಳು ಅವರಿಗೆ ಪ್ರಿಯವಾದ ವಿಷಯಗಳು. 'The Cultural Heritage of India' ಗ್ರಂಥದ ನಾಲ್ಕನೇ ಸಂಪುಟದಲ್ಲಿ ಅವರು ಬರೆದಿರುವ 'ಭಾಗವತದ ಸಂದೇಶಗಳು' (The Massage of Bhagavata)

ಎಂಬ ಲೇಖನ ಹಾಗೂ 'Narada Bhakti Sutra Commentary' ಪುಸ್ತಕ ಇವುಗಳಿಂದ ಅವರ ಅಪಾರ ವಿದ್ವತ್ತು ಎಲ್ಲೆಡೆ ಜನ ಜನಿತವಾಗಿದೆ. ಅವರು ನಾರದ ಭಕ್ತಿಸೂತ್ರದ ಮೇಲಿನ ಗ್ರಂಥವನ್ನು ಬರೆಯುವಾಗ ಸ್ವಾಮಿ ನಿಖಿಲಾನಂದರ 'The Gospel of Sri Ramakrishna' ಅವರ ಬಳಿ ಇರಲಿಲ್ಲ. ಅದು ಆಗ ತಮ್ಮ ಬಳಿ ಇದ್ದಿದ್ದರೆ, ನಾರದ ಭಕ್ತಿಸೂತ್ರ ಭಾಷ್ಯ ಗ್ರಂಥವು ಈಗಿನ ಗಾತ್ರಕ್ಕಿಂತ ಮೂರು ಪಟ್ಟು ಇರುತ್ತಿತ್ತು ಎಂದು ಅವರೇ ಹೇಳಿಕೊಂಡಿದ್ದಾರೆ.

ಯಾವಾಗಲೂ ವಿನೀತಭಾವದಿಂದ ಕೂಡಿದ್ದ, ಸುಲಭವಾಗಿ ಎಲ್ಲರಿಗೂ ಲಭ್ಯವಾಗಿರುತ್ತಿದ್ದ ವಿಶೇಷ ಸ್ವಭಾವ ಅವರದು. ಶ್ರೀ ರಾಮನ ಸ್ವಭಾವ ವೈಶಿಷ್ಟ್ಯವೇ ಇದು ಎನ್ನಲಾಗುತ್ತಿದೆ; ಯಾವುದೇ ಅಸಾಧಾರಣ ವ್ಯಕ್ತಿಯ ಗುಣ ಅದು. ಅವರು ಎಲ್ಲರಿಗೂ ಲಭ್ಯರಾಗಿದ್ದರು. ಯಾರೇ ಆಗಲಿ, ಅವರೊಂದಿಗೆ ಮಾತನಾಡುವ ಮೊದಲೇ ಅವರು ಮಾತನಾಡುತ್ತಿದ್ದರು. ಈ ರೀತಿ ಅವರು ಎಲ್ಲರಿಗೂ ಆತ್ಮೀಯರಾಗುತ್ತಿದ್ದರು; ವಿಶೇಷವಾಗಿ ಯುವಕರೊಂದಿಗೆ. ಉಪನಿಷತ್ತುಗಳು ಸಾಕ್ಷಾತ್ಕಾರ ಪಡೆದವನನ್ನು 'ಶ್ರೋತ್ರಿಯೋ ಅವೃಜಿನೋ ಅಕಾಮಹತಃ' ಎಂದು ವರ್ಣಿಸುತ್ತವೆ - ವೇದಗಳನ್ನು ಅರಿತ, ಪಾಪರಹಿತನಾದ, ಕಾಮನೆಗಳನ್ನು ಗೆದ್ದ ವ್ಯಕ್ತಿಯನ್ನು ಸಾಕ್ಷಾತ್ಕಾರ ಪಡೆದವನು ಎನ್ನಬಹುದು. ಸ್ವಾಮಿ ತ್ಯಾಗೀಶಾನಂದರ ಜೀವನದಲ್ಲಿ ವಿದ್ಯಾಭ್ಯಾಸ, ವಿದ್ವತ್ತು, ಶಾಸ್ತ್ರಗಳಲ್ಲಿ ಆಳವಾದ ಜ್ಞಾನ, ತಪಸ್ಸು-ಧ್ಯಾನಗಳಿಂದ ಕೂಡಿದ ಆಂತರಿಕ ಜೀವನ ಇವುಗಳು ಎಂದಿಗೂ ಅವರ ಸೇವಾಚಟುವಟಿಕೆ, ಭಕ್ತಿಗಳ ಜೊತೆಗೆ ಬಿಕ್ಕಟ್ಟನ್ನು ತರಲಿಲ್ಲ. ಪ್ರತಿದಿನ ಆರತಿ ನಡೆಯುವಾಗ ಅವರ ವರಾಂಡದ ತುದಿಯಲ್ಲಿ ಆಸನ, ಜಪಮಾಲೆ, ಪ್ರತ್ಯೇಕ ಕೋಣೆ, ಭಾವಚಿತ್ರ ಯಾವುದೂ ಇಲ್ಲದೆ ಧ್ಯಾನಮಗ್ನರಾಗಿ ಕುಳಿತಿರುತ್ತಿದ್ದುದನ್ನು ಹಲವರು ನೋಡಿದ್ದಾರೆ. ಪ್ರಾರ್ಥನಾ ಮಂದಿರಕ್ಕೆ ಬರುವ, ಹೋಗುವ ಭಕ್ತರುಗಳು ಅವರ ಗಮನಕ್ಕೆ ಬರುತ್ತಲೇ ಇರಲಿಲ್ಲ. ಅವರ ದೀರ್ಘಪ್ರವಚನಗಳ ಆಧಾರದ ಮೇಲೆ ನಾವು ಇತರ ಶಾಸ್ತ್ರ ಗ್ರಂಥಗಳ ಮೇಲೆ ಅಧ್ಯಯನ ನಡೆಸಬಹುದು. ತ್ಯಾಗಮನೋಭಾವದಿಂದ ತುಂಬಿದ ಬದುಕನ್ನು ಅವರು ಬಾಳಿದರು. ತಮ್ಮ 'ತ್ಯಾಗೀಶ' ಎಂಬ ಹೆಸರಿಗೆ ಸಂಪೂರ್ಣ ಅನ್ವಯವಾಗುವಂತೆ, 'ಸ್ಥಿತಪ್ರಜ್ಞ'ನ ಲಕ್ಷಣವನ್ನು ಹೊಂದಿದ್ದ ಆದರ್ಶ ಸಾಧು ಅವರಾಗಿದ್ದರು.

ಮಹಾಪುರುಷರೊಬ್ಬರ ಜೀವನ ಹೀಗಿತ್ತು. ಶಾಂತಿ, ನೆಮ್ಮದಿ, ಕೃತಾರ್ಥತೆ, ತೃಪ್ತಿ, ಮೃತ್ಯುಭಯವಿಲ್ಲದಿರುವಿಕೆ - ಈ ಮೂಲಭೂತ ಜೀವನ ಮೌಲ್ಯಗಳು, ಅವನ್ನು ಪಡೆಯಲು ಮಾಡಬೇಕಾದ ಅಭ್ಯಾಸಗಳು, ಮಾನವ ಜೀವನದ ಉದ್ದೇಶ ಹಾಗೂ ಗುರಿ - ಇವುಗಳೇ ನಾವಿಲ್ಲಿ ಕಲಿಯಬೇಕಾದ ಪಾಠಗಳು. ಇಂಥ ಗುಣಗಳನ್ನು ಪಡೆದಿರುವ ಅಸಾಧಾರಣ ವ್ಯಕ್ತಿಗಳನ್ನು 'ವಿಭೂತಿಪುರುಷರು' ಎನ್ನುತ್ತಾರೆ. ಸ್ವಾಮಿ ತ್ಯಾಗೀಶಾನಂದರಲ್ಲಿ ನಾವು ಅಂಥ ವ್ಯಕ್ತಿತ್ವವನ್ನು ಕಾಣಬಹುದು. ❃


*ಗ್ರಂಥ ಋಣ:*

*೧. **'ತ್ಯಾಗೀಶಾನಂದರು'** - ಡಾ.ಪ್ರಭುಶಂಕರ, ರಾಷ್ಟ್ರೋತ್ಥಾನ ಸಾಹಿತ್ಯ*

*೨. 'A Life of Dedication' - ಪ್ರಕಾಶಕರು: ಸ್ವಾಮಿ ವಿವೇಕಾನಂದ ಎಜುಕೇಶನಲ್ ಸೊಸೈಟಿ (SVES)*

*೩. **'ಸ್ವಾಮಿ ತ್ಯಾಗೀಶಾನಂದ'** ಸುಸ್ಮಾರಿಕೆ-೩, ಸ್ವಾಮಿ ಕೀರ್ತಿದಾನಂದರ ಲೇಖನ, ಪ್ರಕಾಶಕರು: SVES*

*೪. **'ಸ್ವಾಮಿ ತ್ಯಾಗೀಶಾನಂದರು'**, ಸ್ವಾಮಿ ಶಾಂತಿವ್ರತಾನಂದ (ಕನ್ನಡ) : ವಿವೇಕ ಹಂಸ ಪ್ರಕಾಶನ*


## ಭಗವಂತನ ದಿವ್ಯ ಪ್ರಕಾಶ

ಹೂವು ಕಾಯಿಯಾಗಿ ಬೆಳೆದಮೇಲೆ ಹೂವಿನ ದಳಗಳು ಉದುರಿ ಹೋಗುವುವು. ಅಂತೆಯೇ ನಮ್ಮಲ್ಲಿರುವ ದೇವರು, ಕ್ರಮವಾಗಿ ಅಥವಾ ವೇಗವಾಗಿ, ತಾನಾಗಿ ಪ್ರಕಟವಾಗಲು ಬಯಸಿದಾಗ, ಅಹಂಭಾವ ಮತ್ತು ಅದಕ್ಕೆ ಸಂಬಂಧಿಸಿದ ಆಸೆಗಳು ನಮ್ಮನ್ನು ಬಿಟ್ಟು ಹೋಗುತ್ತಾ ಕಡೆಗೆ ಸಂಪೂರ್ಣವಾಗಿ ಮಾಯವಾಗುವುವು. ಆಗಲೇ ದೇವರು ನಮ್ಮನ್ನು ತನ್ನ ಸಾಕ್ಷಾತ್ ಮೂರ್ತಸ್ವರೂಪರನ್ನಾಗಿ ಮಾರ್ಪಡಿಸುತ್ತಾ ನಮ್ಮ ಸ್ವರೂಪದ ಪ್ರತಿಯೊಂದು ಭಾಗವನ್ನೂ ಪ್ರವೇಶಿಸುವನು, ಆವರಿಸುವನು, ಮತ್ತು ಆಕ್ರಮಿಸಿಕೊಳ್ಳುವನು. ಪ್ರತಿಯೊಬ್ಬನೂ ಈ ಪರಮ ಪೂರ್ಣತೆಯನ್ನು ಪಡೆಯಲು ಸಾಧ್ಯ. ದೇವರಿಗೆ ಸಮಗ್ರವಾದ ಎಲ್ಲ ಬಗೆಯ ಆತ್ಮಸಮರ್ಪಣೆಯು ಅಗತ್ಯವಾಗಿದೆ. ಆದುದರಿಂದ ನಮ್ಮ ಸಂಕಲ್ಪ, ಆಲೋಚನೆ ಮತ್ತು ಸಂವೇದನೆಗಳು ಅವನ ಶಕ್ತಿ, ಸೌಂದರ್ಯ ಮತ್ತು ವೈಭವಗಳನ್ನು ಪ್ರಕಟಿಸುವುದರ ಹೊರತು ಬೇರೆ ಯಾವ ಉದ್ದೇಶವೂ ಇಲ್ಲದೆ ದಿವ್ಯ ಪ್ರಕಾಶದಿಂದ ತುಂಬುವುದು.

ದೇವರ ಸಾಕ್ಷಾತ್ಕಾರದಲ್ಲಿಯೇ ಜೀವನದ ಪರಿಪೂರ್ಣತೆಯು ಅಡಗಿದೆ. ದೇವನೊಬ್ಬನೇ ಸತ್ಯವಸ್ತು. ಅವನೇ ಪ್ರಪಂಚದಲ್ಲಿ ಎಲ್ಲವೂ ಆಗಿದ್ದಾನೆ, ನೀನು ಅವನಿಗಿಂತ ಪ್ರತ್ಯೇಕವೆಂದು ಎಲ್ಲಿಯವರೆಗೆ ಭಾವಿಸುವೆಯೋ ಅಲ್ಲಿಯವರೆಗೆ ಅಜ್ಞಾನದಲ್ಲಿ ಜೀವಿಸುತ್ತೀಯೆ. ಈ ಅಜ್ಞಾನವೇ ಕ್ಲೇಶ ಮತ್ತು ಬಂಧನಕ್ಕೆ ಕಾರಣ. ಅವನಿಂದ ಬೇರೆಯೆಂಬ ಭಾವನೆಯು ಮಾಯವಾದಾಗ ಮಾತ್ರ, ಜೀವನದ ಅನ್ವೇಷಣೆಯಾದ ಪರಮ ಸ್ವಾತಂತ್ರ್ಯ ಮತ್ತು ಶಾಂತಿ ಲಭಿಸುವುದು.

— ಸ್ವಾಮಿ ರಾಮದಾಸ್ *('ಸಾಧಕರಿಗೆ ಸೂಚನೆಗಳು', ಪು.೫೩-೫೫)*